**Code No. 16 Z**

**ವಾಣಿಜ್ಯ ಪರೀಕ್ಷೆಗಳು**

# ಕನ್ನಡ ಶೀಘ್ರಲಿಪಿ — ಪ್ರವೀಣ ದರ್ಜೆ — ತೃತೀಯ ಪತ್ರಿಕೆ

## (ಸಂಕ್ಷೇಪಿಸುವಿಕೆ)

ಜನವರಿ / ಫೆಬ್ರವರಿ, 2020

ವೇಳೆ { ಉಕ್ತಲೇಖನ : 10 ನಿಮಿಷಗಳು
ಸಂಕ್ಷೇಪಣೆ : 1 ಗಂಟೆ 30 ನಿಮಿಷಗಳು

ಪರಮಾವಧಿ ಅಂಕಗಳು : 100

***ಓದುಗರಿಗೆ ಸೂಚನೆಗಳು :***

1) ಈ ಕೆಳಗೆ ಕೊಟ್ಟಿರುವ ವಿಷಯವನ್ನು ಒಂದು ನಿಮಿಷಕ್ಕೆ ಮುನ್ನೂರು (300) ಅಕ್ಷರಗಳ ವೇಗದಲ್ಲಿ ಪ್ರಶ್ನೆ ಪತ್ರಿಕೆಯಲ್ಲಿ ಸೂಚಿಸಿದ ರೀತಿಯಲ್ಲೇ ಓದತಕ್ಕದ್ದು.

2) ಉಕ್ತಲೇಖನ ಮುಗಿದ ನಂತರ ಅಭ್ಯರ್ಥಿಗಳು ಶೀಘ್ರಲಿಪಿಯನ್ನು ಪರೋಕ್ಷ ವಿಧಾನದಲ್ಲಿ ಸುಮಾರು 1000 ಅಕ್ಷರಗಳಿಗೆ ಲಿಪಿ ಬರಹದಲ್ಲಿ ಸಂಕ್ಷೇಪಿಸಬೇಕೆಂದು ಅಭ್ಯರ್ಥಿಗಳಿಗೆ ಸೂಚನೆ ನೀಡತಕ್ಕದ್ದು

---

ಲೋಕಸಭೆಯಲ್ಲಿ ವಿರೋಧ ಪಕ್ಷದ ನಾಯಕರೊಬ್ಬರು ರೈತರ ಮೂಲಭೂತ ಸೌಕರ್ಯಗಳ ಬಗ್ಗೆ ವ್ಯಕ್ತಪಡಿಸಿದ ಅಭಿಪ್ರಾಯಗಳು.

ಮಾನ್ಯ ಸಭಾಧ್ಯಕ್ಷರೇ,

ನಾನಿಂದು ರೈತರ ಮೂಲಭೂತ
$\frac{1}{4}$ ಸಮಸ್ಯೆಗಳ ಬಗ್ಗೆ ಕೆಲವು ಮಾತುಗಳ/ನ್ನು
ಹೇಳಬಯಸುತ್ತೇನೆ. ಭಾರತದ ರಾಷ್ಟ್ರೀಯ ವರಮಾನಕ್ಕೆ ಶೇಕಡ ಮೂವತ್ತರಷ್ಟು ಕೊಡುಗೆ ನೀಡುತ್ತಿರುವವರು ನಮ್ಮ ರೈತರು ಮತ್ತು ವ್ಯವಸಾಯ ದೇಶದ ಕೃಷಿ ಕ್ಷೇತ್ರ ಒಟ್ಟು
$\frac{1}{2}$ ಜನಸಂಖ್ಯೆಯ ಶೇಕ/ಡ ಅರವತ್ನಾಲ್ಕರಷ್ಟು
ಮಂದಿಗೆ ಬದುಕು ಮತ್ತು ಉದ್ಯೋಗಾವಕಾಶ ಒದಗಿಸುತ್ತಿದೆ. ಆದರೆ ಇದಕ್ಕೆ ಪ್ರತಿಯಾಗಿ ಎಲ್ಲ ಸರ್ಕಾರಗಳೂ ರೈತರನ್ನು ಮಲತಾಯಿ ಧೋರಣೆಯಿಂದ ಕಂಡಿವೆ. ಈಗ ರೈತರು
ಎಚ್ಚೆತ್ತುಕೊಳ್ಳುತ್ತಿದ್ದಾರೆ. ನ/ಮ್ಮ ನೈಜ $\frac{3}{4}$
ಹಕ್ಕುಗಳನ್ನು ಆಗ್ರಹಪೂರ್ವಕವಾಗಿ ಮಂಡಿಸುತ್ತಿದ್ದೇನೆ.

ಉಚಿತ ಭೂಮಿ, ಐದರಿಂದ ಹತ್ತು ವರ್ಷ ತೆರಿಗೆ ರಜೆ, ಆಮದು ಸಹಾಯಧನ ಮತ್ತು ಅಗತ್ಯ ವಿದ್ಯುತ್ ಉತ್ಪಾದನೆಗೆ
ಭಾರಿ ಬಂಡವಾಳ ಹೂಡಿಕೆ ಮೊದಲಾದX 1
ಸೌಲಭ್ಯಗಳನ್ನು ಕೈಗಾರಿಕೆಗೆ ಒದಗಿಸಲಾಗುತ್ತಿದೆ. ಕೃಷಿಗೆ ಈ ಸೌಲಭ್ಯಗಳಿಲ್ಲ. ರೈತರು ಮತ್ತು ಕೃಷಿ ಕಾರ್ಮಿಕರು ಅಸಂಘಟಿತರಾಗಿದ್ದು ಮೂಲಭೂತ ಸೌಲಭ್ಯಗಳಿಂದಲೂ ವಂಚಿತರಾಗಿದ್ದಾರೆ. ಬ್ಯಾಂಕು ಮತ್ತು ಇತರ
ಹಣ/ಕಾಸು ಸಂಸ್ಥೆಗಳು ಕೈಗಾರಿಕೆಗಳಿಗೆ ಕೊಡುವ $\frac{1}{4}$
ನೆರವು ಮತ್ತು ಸಾಲ ಶೇಕಡ ಅರವತ್ತರಷ್ಟಿದ್ದರೆ ಕೃಷಿಯ ವಿಷಯದಲ್ಲಿ ಇದು ಕೇವಲ ಶೇಕಡ ಹದಿನೈದು ಮಾತ್ರವಾಗಿದೆ. ಆದ್ದರಿಂದ ಕೃಷಿಗೂ

$\frac{1}{2}$ ಕೈಗಾರಿಕೆಯ ಸ್ಥಾನಮಾನ/ ನೀಡಿ ಕೈಗಾರಿಕೆಗೆ
ನೀಡುವ ಸೌಲಭ್ಯಗಳನ್ನು ಒದಗಿಸಬೇಕೆಂದು ಹೇಳುತ್ತೇನೆ.

ಕೈಗಾರಿಕಾ ಉತ್ಪನ್ನಗಳಿಗೆ ಬೆಲೆ ನಿಗದಿಪಡಿಸುವ ರೀತಿಯಲ್ಲಿ ಕೃಷಿ ಉತ್ಪನ್ನಗಳಿಗೆ ಬೆಲೆ ನಿಗದಿಪಡಿಸುತ್ತಿಲ್ಲ.
$\frac{3}{4}$ ಇತ್ತೀಚೆಗೆ ಆಲೂಗ/ಡ್ಡೆ, ಈರುಳ್ಳಿ, ಶೇಂಗಾ,
ಹತ್ತಿ ಮತ್ತು ರೇಷ್ಮೆ ಮೊದಲಾದವುಗಳ ಬೆಲೆಯಲ್ಲಿ ಭಾರಿ ಕುಸಿತದಿಂದ ಅನಾಹುತಗಳಿಗೆ ಕಾರಣವಾಯಿತು. ಒಬ್ಬ ರೈತ ತನ್ನ ಹೆಂಡತಿ ಮಕ್ಕಳೊಂದಿಗೆ ಹೊಲದಲ್ಲಿ ವ್ಯವಸಾಯಮಾಡಿ
2 ಬೆಳೆ ತೆಗೆಯಲು ಹಾಕುXವ ಹೂಡಿಕೆಯಲ್ಲಿ
ಗೊಬ್ಬರ, ಬೀಜ, ಕ್ರಿಮಿನಾಶಕ, ಉಳುಮೆ, ನೀರಿನ ಸೌಲಭ್ಯ, ಕೊಯಿಲು ಇವುಗಳಿಗಾಗಿ ಮಾಡುವ ವೆಚ್ಚವಲ್ಲದೆ ಅವನು ಮತ್ತು ಅವನ ಕುಟುಂಬದ ಸದಸ್ಯರ ದೈಹಿಕ ಶ್ರಮವನ್ನು ಲೆಕ್ಕ
$\frac{1}{4}$ ಹಿಡಿಯಬೇಕಾಗುತ್ತ/ದೆ. ಇದಕ್ಕೆ ಪ್ರತಿಯಾಗಿ
ಅವನಿಗೆ ಶೇ. ಇಪ್ಪತ್ತರಷ್ಟಾದರೂ ಪ್ರತಿಫಲ
$\frac{1}{2}$ ಸಿಗುವಂತಾಗಬೇಕು. ಕನಿಷ್ಠ/ ಬೆಂಬಲ
ಬೆಲೆಗಿಂತಲೂ ಕೃಷಿ ಉತ್ಪನ್ನ ದರ ಕುಸಿದಾಗ ಸರಕಾರ ಕುಸಿತವನ್ನು ತಪ್ಪಿಸಬೇಕು ಮತ್ತು ಘೋಷಿತ ಕನಿಷ್ಠ ಬೆಂಬಲ ಬೆಲೆಯ ದರದಲ್ಲಿ ಸರಕಾರವೇ ರೈತರಿಂದ ಆ ಉತ್ಪನ್ನಗಳನ್ನು ಕೊಳ್ಳುವಂತಾಗಬೇಕು. ಈ ಉದ್ದೇಶಕ್ಕಾಗಿಯೇ ಎರಡು ಸಾವಿರದ ಹದಿನೆಂಟು ಹತ್ತೊಂಬತ್ತನೇ ವರ್ಷದ ಆಯವ್ಯಯದಲ್ಲಿ ತೊಂಬತ್ತು
$\frac{3}{4}$ ಸಾವಿರ ಕೋಟಿ ರೂಪಾ/ಯಿಗಳ ವಿಶೇಷ
ನಿಧಿಯೊಂದರ ವ್ಯವಸ್ಥೆ ರೂಪಿತವಾಗಬೇಕೆಂದು ಹೇಳಲು ಇಚ್ಛಿಸುತ್ತೇನೆ.

ಕೃಷಿಗೆ ಕೊಡುವ ಸಹಾಯಧನವನ್ನು ನಿಕೃಷ್ಟವಾಗಿ ಕಾಣುವುದು ಸರಿಯಲ್ಲ. ಕೃಷಿ ಕ್ಷೇತ್ರಕ್ಕೆ ನೀಡುತ್ತಿರುವ ಸಹಾಯಧನವನ್ನು
ರದ್ದುXಪಡಿಸುವುದಾಗಲೀ ಅಥವಾ ಅದರ 3
ಪ್ರಮಾಣವನ್ನು ಕಡಿತಗೊಳಿಸಬಾರದು. ಇದು ರೈತರಿಗೆ ಬಗೆಯುವ ದ್ರೋಹ. ಅಭಿವೃದ್ಧಿ ಹೊಂದಿದ ರಾಷ್ಟ್ರಗಳೇ ನಮ್ಮ ದೇಶಕ್ಕೆ ಕೃಷಿ ಉತ್ಪನ್ನಗಳನ್ನು ರಫ್ತು ಮಾಡಲು ತಮ್ಮ
ತಮ್ಮ ದೇಶಗ/ಳಲ್ಲೇ ಕೃಷಿಗೆ ಧನಸಹಾಯ $\frac{1}{4}$
ನೀಡುತ್ತಿರುವಾಗ ನಮ್ಮ ದೇಶವೂ ನಮ್ಮ ಕೃಷಿ ಉತ್ಪನ್ನಗಳ ರಫ್ತನ್ನು ಪ್ರೋತ್ಸಾಹಿಸಲು ಕೃಷಿಗೆ ಸಹಾಯಧನ ನೀಡುವುದು ಯೋಗ್ಯ. ರೈತರಿಗೆ ಸಹಾಯಧನ ನೀಡಬೇಕೆಂಬ
ವಿಷಯ ಬಂದಾಗಲೆಲ್ಲ ಆ/ರ್ಥಿಕ $\frac{1}{2}$
ಕೊರತೆಯನ್ನು ಸರಿದೂಗಿಸಲು ಆಹಾರ ಧಾನ್ಯ ಮತ್ತು ರಸಗೊಬ್ಬರಗಳಿಗೆ ನೀಡಲಾಗುವ ಧನಸಹಾಯವನ್ನು ಕಡಿತಗೊಳಿಸಬೇಕಾಗುತ್ತದೆ ಎಂಬ ವಾದವನ್ನು ಮಂಡಿಸಲಾಗುತ್ತದೆ.
ಹತ್ತು ಲಕ್ಷ ಕೋಟಿ ರೂಪಾಯಿಗ/ಳ ಆರ್ಥಿಕ $\frac{3}{4}$
ಕೊರತೆಗೆ ಕೃಷಿಯ ಧನಸಹಾಯ ಪ್ರಮುಖ ಕಾರಣವಲ್ಲ. ಯಾವ ಕಾರಣಕ್ಕೂ ಕೃಷಿ ಮತ್ತು ಆಹಾರ ಧಾನ್ಯಗಳಿಗೆ ನೀಡಲಾಗುವ ಸಹಾಯಧನ ರದ್ದುಪಡಿಸಬಾರದು ಮತ್ತು ಅದರ ಪ್ರಮಾಣದಲ್ಲಿ ಕಡಿತ
ಮಾXಡಬಾರದೆಂದು ಒತ್ತಾಯ ಮಾಡುತ್ತೇನೆ. 4

ಬಡತನದ ರೇಖೆಯ ಕೆಳಗಿರುವ ಮತ್ತು ಬಡತನದ ರೇಖೆಗಿಂತ ಸ್ವಲ್ಪ ಮೇಲಿರುವ ಜನತೆಗೆ ಆಹಾರ ಧಾನ್ಯಗಳನ್ನು ನ್ಯಾಯ ಬೆಲೆಯಲ್ಲಿ ಸಾರ್ವಜನಿಕ ವಿತರಣಾ ಪದ್ಧತಿಯ
ಮೂಲ/ಕ ವಿತರಿಸುವುದು ಯಾವುದೇ $\frac{1}{4}$
ನಾಗರೀಕ ಸರ್ಕಾರದ ಕರ್ತವ್ಯ. ಆದರೆ ಇದಕ್ಕೆ ನಮ್ಮ ಬಡ ರೈತರು ಬಲಿಪಶುವಾಗುವುದು ಸರಿಯಲ್ಲ. ದೇಶದ ಜನರ ಬಾಯಿಗೆ ತುತ್ತು

ಒದಗಿಸಲು ಆಹಾರ ಉತ್ಪಾದಿಸುವ ರೈತ ತಾನೇ
$\frac{1}{2}$ ಸ/ರಿಯಾಗಿ ಉಣ್ಣುವ ಸ್ಥಿತಿಯಲ್ಲಿ ಇಲ್ಲದಿದ್ದರೆ
ಅದೆಂತಹ ವ್ಯವಸ್ಥೆ ? ಎಂತಲು ರೈತನು ಬೆಳೆದ
ಧಾನ್ಯಕ್ಕೆ ಹೆಚ್ಚಿನ ಬೆಲೆ ನೀಡುವುದು ಅಗತ್ಯ.
ಈಗಿರುವ ವ್ಯವಸ್ಥೆಯಲ್ಲಿ ರೈತರು ಉತ್ಪಾದಿಸುವ
$\frac{3}{4}$ ಆಹಾರ ಧಾನ್ಯಗಳಲ್ಲಿ ಅರ್ಧದ/ಷ್ಟನ್ನು
ಸರಕಾರವೇ ಮಾರುಕಟ್ಟೆ ದರದ ಕೇವಲ ಅರ್ಧ
ಬೆಲೆಗೆ ಕೊಳ್ಳುತ್ತದೆ. ಹೀಗಾಗಿ ಸರಕಾರವೇ
ರೈತರ ಮೇಲೆ ಏಕಪಕ್ಷೀಯವಾದ ಹೊರೆ
ಹೊರಿಸಿದಂತಾಗಿದೆ. ಆದ್ದರಿಂದ ಈ ಧಾನ್ಯ
5 ಸಂಗ್ರಹಣ ಪ್ರಕ್ರಿಯೆಯಲ್ಲಿ ಪಾರದರ್ಶXಕತೆ
ಅವಶ್ಯಕ. ಸರಕಾರ ರೈತರಿಂದ ಲೆವಿ ಸಂಗ್ರಹಿಸುವ
ಪದ್ಧತಿಯನ್ನು ಕೈಬಿಟ್ಟು ಸಾರ್ವಜನಿಕ ವಿತರಣಾ
ಪದ್ಧತಿಗೆ ಬೇಕಾದ ಆಹಾರ ಧಾನ್ಯಗಳನ್ನು
ಮಾರುಕಟ್ಟೆ ಬೆಲೆಯಲ್ಲಿಯೇ ಖರೀದಿಸುವುದು
$\frac{1}{4}$ ಉಚಿತವೆಂದು ನನ್ನ/ ಅಭಿಪ್ರಾಯ.

ನಾಗರೀಕ ಜಗತ್ತನ್ನು ಕಾಡುತ್ತಿರುವ ಮಹಾ
ಸಮಸ್ಯೆಗಳಲ್ಲಿ ಪರಿಸರ ಮಾಲಿನ್ಯ ಒಂದು.
ನಮ್ಮ ಸುತ್ತಮುತ್ತಲಿನ ಸನ್ನಿವೇಶ, ಇವೆಲ್ಲ ಹೇಗೆ
ಪ್ರತಿ ನಿಮಿಷ ನಿಮಿಷದಲ್ಲೂ ಮಾಲಿನ್ಯಕ್ಕೆ
$\frac{1}{2}$ ಬಲಿಯಾಗುತ್ತಿವೆ ಎನ್ನುವುದು/ ನಮಗೆಲ್ಲ
ಸರಿಯಾಗಿ ತಿಳಿದಿಲ್ಲ. ಏಕೆಂದರೆ ಈ ಪರಿಸರ
ಮಾಲಿನ್ಯ ಕೆಲವು ಸಾರಿ ಅಗೋಚರ ಮತ್ತು ನಮ್ಮ
ಅರಿವಿಗೆ ಬಾರದ, ದೃಷ್ಟಿಗೆ ಗೋಚರಿಸದ
ರೀತಿಯಲ್ಲಿ ನಡೆದಿರುತ್ತದೆ. ಮಾನವ ಮತ್ತು
$\frac{3}{4}$ ಪಶು ಪಕ್ಷಿಗಳಲ್ಲದೆ/ ಜಲಚರಗಳೂ ಇಂದು
ಮಾಲಿನ್ಯದ ಕೆಡಕನ್ನು ಅನುಭವಿಸುತ್ತಿವೆ. ನಮ್ಮ
ಜಗತ್ತು ನಾಗರಿಕವಾದಷ್ಟು ಮಾಲಿನ್ಯವನ್ನು
ಹೆಚ್ಚಾಗಿ ಜನರಿಗೆ ಉಣಬಡಿಸುತ್ತಿದೆ. ನಾಗರೀಕತೆ
ಜಗತ್ತಿನ ಜೀವಿಗಳಿಗೆ ಒಂದು ರೀತಿಯಲ್ಲಿ
ಕೆXಡಕನ್ನೂ ತಂದಿದೆ. ನಮ್ಮ ಪರಿಸರ ಹೇಗೆ 6
ಮಾಲಿನ್ಯಗೊಳ್ಳುತ್ತಿದೆ ಎಂಬುದರ ಕಡೆ ಈಗ ಸ್ವಲ್ಪ
ಗಮನಹರಿಸೋಣ.

ಮೊದಲನೆಯದಾಗಿ ಉಸಿರಾಡುವ
ಜೀವಿಗಳಿಗೆ ಬಹು ಮುಖ್ಯವಾದದ್ದು
ಪ್ರಾಣವಾಯು. ಶುದ್ಧ ಗಾಳಿಯಿಲ್ಲದೆ
ಉ/ಸಿರಾಡದೆ ಮಾನವ ಮತ್ತು ಪ್ರಾಣಿಗಳು $\frac{1}{4}$
ಬದುಕಲಾರವು. ಆದ್ದರಿಂದಲೇ ವಾಯುವನ್ನು
ನಾವು ಪ್ರಾಣವಾಯು ಎಂದು ಕರೆದದ್ದು.
ಮಾನವ ಬರುಬರುತ್ತಾ ತನ್ನ ಉಪಯೋಗಕ್ಕಾಗಿ
ಅರಣ್ಯವನ್ನು ನಾಶಮಾಡಿದ. ಕಾಡು ಕಡಿದು
ತನಗೆ/ ವಸತಿ ಮತ್ತು ಆಹಾರ ಬೆಳೆದುಕೊಳ್ಳಲು $\frac{1}{2}$
ಭೂಮಿ ಮಾಡುತ್ತಿದ್ದಾನೆ. ಜನಸಂಖ್ಯೆ
ಹೆಚ್ಚಿದಂತೆಲ್ಲ ಈ ಕಾಡಿನ ನಾಶವೂ
ಜಾಸ್ತಿಯಾಗುತ್ತಿದೆ. ಗಿಡಮರಗಳ ನಾಶದಿಂದ
ಪ್ರಕೃತಿದತ್ತವಾಗಿ ಒಳ್ಳೆಯ ಗಾಳಿ ಸಹ ನಮಗೆ
ದೊರಕದಂ/ತೆ ಆಗುತ್ತಿದೆ. ಗಾಳಿಯಲ್ಲಿರುವ $\frac{3}{4}$
ಇಂಗಾಲಾಮ್ಲವನ್ನು ಉಪಯೋಗಿಸಿಕೊಂಡು
ಆಮ್ಲಜನಕವನ್ನು ಬಿಡುವ ಹಸಿರು
ಗಿಡಮರಗಳೆ ಇಲ್ಲವಾದರೆ ಗಾಳಿಯ ಶುದ್ಧತೆಗೆ
ಧಕ್ಕೆ ಬಂದಂತಲ್ಲವೇ ? ಗಾಳಿಗೆ ಸದಾ
ಚಲನೆಯಿರುವುದರಿಂXದ ನಾವು ಬದುಕಿದ್ದೇವೆ. 7
ಒಂದು ಪಕ್ಷ ಗಾಳಿ ಒಂದು ಘನೀಕೃತ ವಸ್ತುವಾಗಿ
ಬಿಟ್ಟಿದ್ದರೆ ನಾವೆಲ್ಲ ಇಂದು ಭೂಮಿಯ ಮೇಲೆ
ಇರುತ್ತಿರಲಿಲ್ಲ ಅನ್ನಿಸುತ್ತದೆ.

ಎರಡನೇಯ ಜೀವಾಧಾರ ವಸ್ತು ಜಲ.
ಶುದ್ಧ ಜಲವೆನ್ನುವುದು ಈಗ ನಾಗರೀ/ಕರಿಗೆ $\frac{1}{4}$
ಕನಸು. ಒಳ್ಳೆಯ ಮಳೆಯಿಲ್ಲದೆ ಅನೇಕ ನದಿಗಳು

ಬತ್ತಿಹೋಗುತ್ತಿವೆ. ಮಾನವನಿಗೆ ಕುಡಿಯಲು
ನೀರು ಬೇಕೇ ಬೇಕು. ಗಾಳಿಯಂತೆ ಇದೂ
ಪ್ರಾಣಾಧಾರವಾದದ್ದು. ಆದರೆ ಇಂದು ಎಷ್ಟು
$\frac{1}{2}$ ಜನ ಶುದ್ಧ ನೀರನ್ನು ಕುಡಿಯುತ್ತಿದ್ದಾರೆ/
ಅನ್ನುವುದು ಹೇಳಲಾಗದಂತಹ ವಿಷಯವಾಗಿದೆ.
ನಮ್ಮ ಮನೆಗಳ ಕೊಳಾಯಿಗಳಲ್ಲಿ ಅಥವಾ
ಬೀದಿಯ ಸಾರ್ವಜನಿಕ ಸ್ಥಳಗಳಲ್ಲಿ ಬರುವ ಈ
ಗ ಬರುತ್ತಿರುವ ಜಲವೇ ನಮಗೆಲ್ಲ ಶುದ್ಧ ನಲ್ಲಿ
$\frac{3}{4}$ ನೀರಾಗಿದೆ. ಅದೇ ಕುಡಿಯು/ವ ನೀರೂ
ಸಹ. ಎಲ್ಲೋ ಕೆಲವರು ಈ ನೀರನ್ನು
ಕಾಯಿಸಿ ಶೋಧಿಸಿ ಕುಡಿಯುತ್ತಾರೆ. ಆದರೆ
ಗ್ರಾಮಾಂತರಗಳಲ್ಲಿ ವಾಸಿಸುವ ಹೆಚ್ಚು
ಭಾರತೀಯರು ತಮ್ಮ ತಮ್ಮ ಹಳ್ಳಿಗಳ ಬಳಿ
ಇರುವ ಬಾವಿ, ಕೆರೆ, ನದಿ, ಕುಂಟೆಗಳನ್ನು
8 ಆಶ್ರಯಿಸಿXರುತ್ತಾರೆ. ಸಿಕ್ಕುವಷ್ಟೆ ಪುಣ್ಯವೆನ್ನುವ
ಸ್ಥಿತಿಯಲ್ಲಿ ಗ್ರಾಮವಾಸಿಗಳು ತಮ್ಮ ಜಲ
ಪೂರೈಕೆಗಾಗಿ ಓಡಾಡಬೇಕಾಗಿದೆ. ಹಾಗೇ ಕೆಲವು
ರಾಜ್ಯ ಸರ್ಕಾರಗಳೂ ಸಹ ತಮ್ಮ ತಮ್ಮ ರಾಜ್ಯದ
$\frac{1}{4}$ ಮುಖ್ಯ ನದಿಗಳ ಜಲಮಾಲಿನ್ಯದ ಕಡೆ ಈಗ/
ಗಮನ ಹರಿಸುತ್ತಿವೆಯೆಂದು ಹೇಳುತ್ತೇನೆ.

ಮಾನವನ ಅತಿ ಆಸೆಯಿಂದಾಗಿ ತನ್ನವರಿಗೆ
ತಾನೇ ವಿಷ ಉಣಿಸಲು ಸಹ ಮುಂದಾಗಿದ್ದಾನೆ.
ತಿನ್ನುವ ಆಹಾರ ವಸ್ತುಗಳಲ್ಲಿ ಎಣ್ಣೆ, ತುಪ್ಪ
$\frac{1}{2}$ ಮುಂತಾದವುಗಳಲ್ಲಿ ಕಲಬೆರಕೆಗೆ ಈಡು/
ಮಾಡಿದ್ದಾನೆ. ಪತ್ರಿಕೆಗಳಲ್ಲಿ ಈ ಕಲಬೆರಕೆ
ತಿಂದು ಸತ್ತ ಹಾಗೂ ಅಸ್ವಸ್ಥರಾದ ಜನರ
ವಿಷಯ ಓದಿದ್ದೇವೆ. ಹಾಗೇ ಸಮುದ್ರ,
ನದಿಗಳಲ್ಲಿ ವಾಸಿಸುವ ಜಲಚರಗಳಿಗೆ
ಮಾನವ ಕಂಟಕನಾಗಿದ್ದಾನೆ. ಬೇಟೆಯಾಡಿ
ತಿನ್ನುವು/ದಲ್ಲದೆ ಜಲಮಾಲಿನ್ಯದಿಂದಾಗಿ $\frac{3}{4}$
ಜಲಚರಗಳು ಸತ್ತು ನೀರಿನ ಮೇಲೆ
ತೇಲಿದ್ದುಂಟು. ಅನೇಕ ಮೀನು ಮುಂತಾದ
ಸಮುದ್ರ ಪ್ರಾಣಿಗಳು ಸತ್ತು ದಡಕ್ಕೆ
ಕೊಚ್ಚಿಕೊಂಡು ಬಂದು ಬಿದ್ದಿರುವುದುಂಟು,
ಇಷ್ಟಾದರು ನಾವು ಎಚ್ಚೆತ್ತುಕೊಂಡಿಲ್ಲ.
ಬಾಯಿಯXಲ್ಲಿ ಈ ಪರಿಸರ ಮಾಲಿನ್ಯದ 9
ಬಗ್ಗೆ ಬೇಕಾದಷ್ಟು ಹೇಳುತ್ತೇವೆ ಹೊರತು
ಯಾವುದೇ ಸೂಕ್ತ ಕ್ರಮ ತೆಗೆದುಕೊಂಡಿಲ್ಲ. ನಮ್ಮ
ದೇಶದಲ್ಲಿ ಪರಿಸರ ಪ್ರಜ್ಞೆ ಬೆಳೆಸುವುದು ಒಂದು
ವಿದ್ಯಾಭ್ಯಾಸ ಮಾಡಿಸಿದಷ್ಟೇ ಆಗುತ್ತದೆ. ಅಂದರೆ
ವಿದ್ಯಾವಂತ/ರು ಪರಿಸರವನ್ನು ಕಾಯ್ದುಕೊಂಡು $\frac{1}{4}$
ಬರುತ್ತಿದ್ದಾರೆ, ಅವಿದ್ಯಾವಂತರು ಪರಿಸರ
ಮಾಲಿನ್ಯವುಂಟು ಮಾಡುತ್ತಿದ್ದಾರೆ ಎಂದು ನಾನು
ಹೇಳುವುದಿಲ್ಲ. ಮಾನವ ವರ್ಗ ತಮ್ಮ ಪಾಲನ್ನು
ಪರಿಸರ ಮಾಲಿನ್ಯಕ್ಕೆ ಸಲ್ಲಿಸುತ್ತಿದೆ ಎಂದು
ವಿಷಾದದಿಂದ/ ಹೇಳುತ್ತೇನೆ. $\frac{1}{2}$

ಕೊನೆಯದಾಗಿ ಈ ಪರಿಸರ ಮಾಲಿನ್ಯ
ಮತ್ತೊಂದು ರೀತಿಯಲ್ಲಿ ಹೆಚ್ಚು ಭಯಂಕರವಾಗಿ
ನಡೆಯುತ್ತಿದೆ. ಅದು ಅಣುಶಕ್ತಿಗಳ ಪರೀಕ್ಷಾ
ಸ್ಫೋಟದಿಂದಾಗಿ ವಾತಾವರಣದತ್ತ ಅಣು
ವಿಕಿರಣ, ಧೂಳು ಎಲ್ಲಾ ಸೇರಿ ಮಾನವ/ನೇ $\frac{3}{4}$
ಮಾನವನನ್ನು ಕೊಲ್ಲುವ ಪರಿಣಾಮಕಾರಿ
ಅಸ್ತ್ರಗಳ ಶೋಧನೆಯಲ್ಲಿ ನಿರತನಾಗಿ, ಅವುಗಳ
ಪ್ರಯೋಗ ಮಾಡುತ್ತಿದ್ದಾನೆ. ಈ ಅಣು
ಸ್ಫೋಟಗಳನ್ನು ಆಯಾ ದೇಶಗಳು ತಡೆಯಬೇಕೆ
ವಿನಃ ಬೇರೆ ದಾರಿ ಇಲ್ಲವೆಂದು ಹೇಳಿ ನನ್ನ
ಮಾತುಗಳನ್ನು ಮುಗಿಸುತ್ತೇನೆ.X 10